# ಸುಸ್ವಾಗತ



ಕರ್ನಾಟಕ ವಿದ್ಯಾವರ್ಧಕ ಸಮಿತಿ, ಅಳವಂಡಿ.

ಶ್ರೀ ಜಗದ್ಗುರು ಪಂಚಾಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಗದಗ.

# ಕನ್ನಡ ಮಾಹಿತಿ ತಂತ್ರಜ್ಞಾನ ಆಧಾರಿತ ಪಾಠ

ಕೃತಜ್ಞತೆಗಳು : ಪ್ರೊ. ಬಿ. ಸಿ. ಉಪ್ಪಿನ

ಪ್ರಾಚಾರ್ಯರು, ಜ. ಪಂ. ಶಿಕ್ಷಣ ಮಹಾವಿದ್ಯಾಲಯ, ಗದಗ.

ಮಾರ್ಗದರ್ಶಕರು : ಪ್ರೊ. ಬಿ.ಬಿ. ಹೊಳಗುಂದಿ

ಉಪನ್ಯಾಸಕರು, ಜ. ಪಂ. ಶಿಕ್ಷಣ ಮಹಾವಿದ್ಯಾಲಯ, ಗದಗ.

# ಪ್ರಸ್ತುತ ಪಡಿಸುವವರು

**ತಾರಾ. ಎಲ್.ಡಿ**

**ವಿಷಯ : ಕನ್ನಡ**

**ಹಾ. ಸಂ : 53**

-: WÀlPÀ :-

“d£À¥ÀzÀ PÀ¯ÉUÀ¼À

aÉÊ¨sÀªÀ”

# ಬೋಧನಾ ಉದ್ದೇಶಗಳು

- ಈ ಪಾಠದ ಕೊನೆಯಲ್ಲಿ ವಿದ್ಯಾರ್ಥಿಗಳು ಜನಪದ ಕಲೆಗಳನ್ನು ಕುರಿತು ಪುನಃಸ್ಮರಿಸುವರು.
- ವಿದ್ಯಾರ್ಥಿಗಳು ವೀರಗಾಸೆ ನೃತ್ಯದ ಬಗ್ಗೆ ವಿವರಿಸುವರು.
- ವಿದ್ಯಾರ್ಥಿಗಳು ಕಂಸಾಳೆ ವೈಶಿಷ್ಟ್ಯತೆಯನ್ನು ವಿವರಿಸುವರು.
- ವಿದ್ಯಾರ್ಥಿಗಳು ಹೊಸ ಪದಗಳ ಅರ್ಥ, ವಾಕ್ಯ ಪ್ರಯೋಗ, ಲೋಪ ಸಂಧಿಯ ಉದಾಹರಣೆ ಹಾಗೂ ನಿಯಮ ಕಂಡು ಹಿಡಿಯುವರು.

## -: ಬೋಧನಾಂಶಗಳು :-

1. ವೀರಗಾಸೆಯ ನೃತ್ಯ ಹಾಗೂ ಒಡಪುಗಳ ವಿವರಣೆ.
2. ವೀರಭದ್ರನ ಹುಟ್ಟಿನ ವಿವರಣೆ.
3. ಕಂಸಾಳೆಯ ವೈಶಿಷ್ಟ್ಯತೆ.
4. ಹೊಸ ಪದಗಳ ಅರ್ಥ, ವಾಕ್ಯ ಪ್ರಯೋಗ, ಲೋಪ ಸಂಧಿಯ ಉದಾಹರಣೆ ಹಾಗೂ ನಿಯಮ.

# ಗದ್ಯ ಪಾಠ – 09 ಜನಪದ ಕಲೆಗಳ ವೈಭವ



**ವೀರಗಾಸೆ :** ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಜನಪದ ಕಲೆ. ಇಬ್ಬರಿಂದ ಮೂವತ್ತು ಮಂದಿ ಇದರಲ್ಲಿ ಭಾಗವಹಿಸುತ್ತಾರೆ. ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ, ಕರಡೆ ಬಳಕೆಯಾಗುತ್ತವೆ. ಕರಡೆಯು ಕುಣಿತದ ಅನಿವಾರ್ಯ ವಾದ್ಯ ಎನಿಸಿದೆ.

ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆ, ಧರಿಸುತ್ತಾರೆ.

“ಅಹಹ ರುದ್ರಾ ಅಹಹಾ ದೇವಾ” ಎಂದು ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ಈ ಕುಣಿತದಲ್ಲಿ ವೀರಭದ್ರ ಹುಟ್ಟಿದ ಸಂದರ್ಭದ ವರ್ಣನೆ ಹೀಗಿದೆ. “ವೀರಭದ್ರ ದೇವರು ಹುಟ್ಟಿದ ರೂಪ ಎಂತು ಎಂದೊಡೆ ಹುಟ್ಟಿದಾಗಲೇ ಹೂವಿನಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ, ರುದ್ರಗಾಸೆ, ಮೆಟ್ಟಿದ ಹೊನ್ನಾವಿಗೆ, ಸಾವಿರ ಶಿರ, ಮೂರುಸಾವಿರ ನಯನ, ಎರಡುಸಾವಿರ ಭುಜ, ಕೆಕ್ಕರಿಸಿದ ಕಣ್ಣು, ಜುಂಜುಮಂಡೆ ಇಂತಪ್ಪ ಶ್ರೀ ವೀರಭದ್ರ ದೇವರು ಹೋಮದ ಕುಂಡದ ಒಳಗೆ ಹೇಗೆ ಬರುತ್ತಾರೆಂದರೆ.

ಚಮಾಳ ಹಾಗೂ ಕರಡೆಯ ಬಡಿತ ಇವರ ಕುಣಿತಕ್ಕೆ ಸ್ಫೂರ್ತಿ ನೀಡುತ್ತವೆ. ನಾಲ್ಕೈದು ಗತಿಗಳಿರುವ ವೀರಗಾಸೆಯ ಕುಣಿತದಲ್ಲಿ ಒಂದೊಂದು ಗತಿಯಿಂದ ಗತಿಗೆ, ಕುಣಿತ, ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ.

ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ. ವೀರಗಾಸೆ ಸಾಮೂಹಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದು ಹೆಸರಿದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು  ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇಷಧಾರಿ ಇದಕ್ಕೆ 'ಖಡ್ಗ' ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಒಡಪು' ಎನ್ನುವರು. ಮತ್ತೊಬ್ಬ ವ್ಯಕ್ತಿ "ಭಲರೇ ವೀರ ಅಹಹಾ ವೀರ" ಎಂದು ಕಾಕು ಹೇಳುತ್ತ ಜಾಗಟೆ ಬಡಿಯುತ್ತಾ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

ಸಾಮಾನ್ಯವಾಗಿ ಮದುವೆ, ಗೃಹಪ್ರವೇಶ, ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ವೀರಭದ್ರನ ಕುಣಿತ ಏರ್ಪಡಿಸುತ್ತಾರೆ. ವೀರಗಾಸೆ ಸಾಮಾಜಿಕ ಸಂದರ್ಭಗಳಲ್ಲಿ ಮನರಂಜನೆಗಾಗಿಯೂ ಬಳಕೆಯಾಗುತ್ತದೆ. ಕುಣಿತ ನೋಡುವವರಿಗೆ ರೋಮಾಂಚನವನ್ನುಂಟು ಮಾಡುತ್ತದೆ.

**ಕಂಸಾಳೆ :** "ಕೂಗೋ ಕೂಗೋ ಮಾದೇವನ, ಕೂಗಯ್ಯ ದುಂಡು ಮಾದೇವನ,
ಕೂಗಿದರೆ ಕುಣಿಯುತ್ತ ಬರುವನು ಮಾದೇವ, ಕೂಗಯ್ಯ ಮುದ್ದು ಮಾದೇವನ"



ದಕ್ಷಿಣ ಕರ್ನಾಟಕದ ಜನ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹದೇಶ್ವರನ ಕಾವ್ಯವನ್ನು ಹೀಗೆ ಹಾಡುತ್ತ ಕಂಸಾಳೆಯೊಂದಿಗೆ ಕುಣಿಯುತ್ತ ಮಹದೇಶ್ವರನ ಬೆಟ್ಟಕ್ಕೆ ಹೋಗುವುದು ವಾಡಿಕೆ. ಕಂಸಾಳೆಯು ಮಲೆಯ ಮಹಾದೇಶ್ವರನ ಭಕ್ತರಾದ ದೇವರ ಗುಡ್ಡರು ಎಂಬ ಧಾರ್ಮಿಕ ವೃತ್ತಿಗಾಯಕರು ಬಳಸುವ ಕಂಚಿನ ತಾಳಗಳು ಇದೊಂದು ಧಾರ್ಮಿಕ ಜನಪದ ವಾದ್ಯ. ಕಾಂಸತಾಲ್ಯ ಎಂಬ ಪದದ ತದ್ಭವ ರೂಪವೇ ಕಂಸಾಳೆ. ದೇವರ ಗುಡ್ಡರು ಇದನ್ನು ಬಿರುದು ಎಂದು ಕರೆಯುತ್ತಾರೆ. ಸಾಧಾರಣ ಬಟ್ಟು ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು. ಆಕೃತಿಯಲ್ಲಿ ವಿಶಿಷ್ಟವಾದದು. ಅಂಗೈ ಅಗಲದ ಚಕ್ರಾಕಾರದ ಬಟ್ಟಲು ಚಿಕ್ಕ ಜಾಗಟೆಯಂತಿರುವ ಮಟ್ಟಸವಾದ, ಮೇಲುತಾಳ. ಮೇಲುತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡ ಹೊಂಡೆವದ ಕಲಾತ್ಮಕ ಹುರಿ. ಇವು ಕಂಸಾಳೆಯ ಮುಖ್ಯ ಭಾಗಗಳು.

ಬಟ್ಟಲನ್ನು ಮೇಲು ಮುಖವಾಗಿ ಎಡ ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದ ಮೇಲು ತಾಳವನ್ನು ಅದರ ಮೇಲೆ ಕಟ್ಟುತ್ತಾರೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಹಾಡುತ್ತಾರೆ. ವೃತ್ತಿಗಾಯಕರು ಬಳಸುವ ವಾದ್ಯಗಳನ್ನೆಲ್ಲ ಕಾಣಿಕೆ ಪಡೆಯುವ ಪಾತ್ರೆಯಾಗಿಯೂ ಬಳಕೆಯಾಗುವ ಏಕಮಾತ್ರ ಸಾಧನ ಕಂಸಾಳೆ. ಗುಡ್ಡರು ಕಾಣಿಕೆಯನ್ನು ಸ್ವೀಕರಿಸುವಾಗ ಕಂಸಾಳೆಯ ಬಟ್ಟಲನ್ನು ಮಾತ್ರ ಮುಂದೆ ಒಡ್ಡಿ ಪಡೆದು ಅನಂತರ ಜೋಳಿಗೆಗೆ ಸುರಿದುಕೊಳ್ಳುತ್ತಾರೆ. ಇದೊಂದು ಪವಿತ್ರ ಸಾಧನವಾದುದರಿಂದ ಅರ್ಪಿಸುವ ಕಾಣಿಕೆ ಮಲೆಯ ಮಹದೇಶ್ವರನಿಗೆ ಸಮರ್ಪಿತವಾದಂತೆಯೇ ಎಂಬ ಭಾವನೆ ಗುಡ್ಡನಿಗೂ ದಾನಿಗೂ ಇರುತ್ತದೆ. ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಪೂಜಿಸುತ್ತಾರೆ. ಕೈಗೆತ್ತಿಕೊಳ್ಳುವ ಮೊದಲು,

“ಏಳ್ಮಲೆ ಹೆತ್ತಯ್ಯ ನಮ್ಮಪ್ಪಾ ಮಾಯ್ಕಾರ ಮಾದೇವ
ನಿನ್ನ ಪಾದವೇ ಗತಿ ಕಣಪ್ಪ ಶರಣು ಶರಣಾರ್ಥಿ”

ಎಂದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಅನಂತರ ಬಾರಿಸಲು ಪ್ರಾರಂಭಿಸುವರು.

# ಹೊಸ ಪದಗಳ ಅರ್ಥ

1. ಹಾಸುಹೊಕ್ಕು – ಆವರಿಸು.
2. ಏಕತಾನತೆ – ಒಂದೇ ರೀತಿಯ.
3. ಹೊನ್ನಾವಿಗೆ – ಚಿನ್ನದ ಪಾದುಕೆ.
4. ವಾಡಿಕೆ – ರೂಢಿ.
5. ಗೊಂಡೇವ – ಬಣ್ಣ ಬಣ್ಣದ ದಾರದ ಗೊಂಚಲು.

# ಕೇಂದ್ರ ಪ್ರಶ್ನೆಗಳು

1) ವೀರಗಾಸೆಯಲ್ಲಿ ವೀರಭದ್ರನ ಹುಟ್ಟನ್ನು ಒಡಪಿನೊಂದಿಗೆ ಹೇಳುತ್ತ ಹೇಗೆ ಕುಣಿಯುವರು?

2) ಕಂಸಾಳೆಯ ಆಕೃತಿಯ ಬಗ್ಗೆ ತಿಳಿಸಿ.

# ಬೆಳವಣಿಗೆ ಪ್ರಶ್ನೆಗಳು

1. ವೀರಗಾಸೆಯ ಪಂಚವಾದ್ಯಗಳಾವವು?
2. ವೀರಭದ್ರ ದೇವರು ಎಲ್ಲಿಂದ ಬರುತ್ತಾರೆ?
3. ಯಾವುಗಳ ಬಡಿತ ವೀರಗಾಸೆ ಕುಣಿತಕ್ಕೆ ಸ್ಫೂರ್ತಿಯಾಗಿವೆ?
4. ವೀರಗಾಸೆ ಎಂತಹ ನೃತ್ಯ?
5. ಉತ್ತರ ಕರ್ನಾಟಕದಲ್ಲಿ ವೀರಗಾಸೆಗೆ ಯಾವ ಕುಣಿತ ಎನ್ನುವರು?
6. ವಿರಗಾಸೆ ಕುಣಿತದ ಎರಡೂ ಸಂದರ್ಭ ತಿಳಿಸಿ?
7. ಕಂಸಾಳೆಯೊಂದಿಗೆ ಕುಣಿಯುತ್ತ ಯಾವ ಬೆಟ್ಟಕ್ಕೆ ಹೋಗುತ್ತಾರೆ?
8. ಮಹದೇಶ್ವರನ ಭಕ್ತರು ಯಾರು?
9. ಕಂಸಾಳೆ ಎಂತಹ ಜನಪದ ವಾದ್ಯವಾಗಿದೆ?
10. ಕಂಸಾಳೆಯು ಎಂತಹ ಸಾಧನವಾಗಿದೆ?

# ವಾಕ್ಯ ಪ್ರಯೋಗ

1. ಒಡಪು - ಮಂತ್ರ

   ವೀರಗಾಸೆಯ ನೃತ್ಯದಲ್ಲಿ ವೀರಭದ್ರನ 'ಒಡಪ'ನ್ನು ಹೇಳುತ್ತಾರೆ.

2. ಕುಣಿತ - ನೃತ್ಯ

   ಕಂಸಾಳೆಯೊಂದಿಗಿನ 'ಕುಣಿತ' ನೋಡಲು ಸುಂದರವಾಗಿರುತ್ತದೆ.

3. ಜನಪ್ರಿಯ - ಪ್ರಸಿದ್ಧ

   ಉತ್ತರ ಕರ್ನಾಟಕದಲ್ಲಿ ವೀರಗಾಸೆಯ ಕುಣಿತ ಬಹಳ 'ಜನಪ್ರಿಯ'ವಾಗಿದೆ.

# ಲೋಪ ಸಂಧಿ

**ಉದಾಹರಣೆಗಳು :-**

1. ಊರು+ಅಲ್ಲಿ = ಊರಲ್ಲಿ
2. ನಾವು+ಎಲ್ಲ = ನಾವೆಲ್ಲ
3. ಮಾತು+ಇಲ್ಲ = ಮಾತಿಲ್ಲ
4. ಈಗ+ಈಗ = ಈಗೀಗ
5. ನೆನಪು+ಇಲ್ಲ = ನೆನಪಿಲ್ಲ

## -: ಲೋಪ ಸಂಧಿಯ ನಿಯಮ :-

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವ ಪದದ ಕೊನೆಯ ಸ್ವರವು ಸಂಧಿ ಪದದಲ್ಲಿ ಲೋಪವಾಗುವುದಕ್ಕೆ **'ಸ್ವರಲೋಪ ಸಂಧಿ ಅಥವಾ ಲೋಪ ಸಂಧಿ'** ಎನ್ನುವರು.

# ಪುನರಾವಲೋಕನ

1. ವೀರಗಾಸೆ ಕುಣಿತದ ಮೂರು ವೇಷಭೂಷಣ ತಿಳಿಸಿ?
2. ವೀರಭದ್ರ ಕುಣಿತಕ್ಕೆ ದಕ್ಷಿಣ ಕರ್ನಾಟಕದಲ್ಲಿ ಏನೆಂದು ಕರೆಯುತ್ತಾರೆ?
3. ವೀರಗಾಸೆ ಸಾಮಾಜಿಕ ಸಂದರ್ಭದಲ್ಲಿ ಯಾವುದಕ್ಕೆ ಬಳಕೆಯಾಗುತ್ತಿದೆ?
4. ದಕ್ಷಿಣ ಕರ್ನಾಟಕದಲ್ಲಿ ಜನ ಯಾವ ಹಬ್ಬದಲ್ಲಿ ಮಹದೇಶ್ವರನ ಬೆಟ್ಟಕ್ಕೆ ಹೋಗುವರು?
5. ಕಂಸಾಳೆಯ ಮುಖ್ಯ ಭಾಗಗಳು ಯಾವವು?

# ಕರಿಹಲಗೆಯ ಸಾರಾಂಶ

ವೀರಗಾಸೆ ಕುಣಿತದ ಎರಡು ವೇಷಭೂಷಣ ಬಿಳಿ ಪಂಚೆಯ ವೀರಗಚ್ಚೆ, ನೀಲಿ ಬಣ್ಣದ ರುಮಾಲು, ಕಾವಿ ಕಸೆಯಂಗಿ. ವೀರಭದ್ರ ಕುಣಿತಕ್ಕೆ ದಕ್ಷಿಣ ಕರ್ನಾಟಕದಲ್ಲಿ ಲಿಂಗಬೀರ ಎಂದು ಕರೆಯುತ್ತಾರೆ. ವೀರಗಾಸೆ ಸಾಮಾಜಿಕ ಸಂದರ್ಭದಲ್ಲಿ ಮನರಂಜನೆಗಾಗಿ ಬಳಕೆಯಾಗುತ್ತಿದೆ. ದಕ್ಷಿಣ ಕರ್ನಾಟಕದ ಜನ ದೀಪಾವಳಿ ಹಬ್ಬದಲ್ಲಿ ಮಹದೇಶ್ವರನ ಬೆಟ್ಟಕ್ಕೆ ಹೋಗುವರು. ಕಂಸಾಳೆಯ ಮುಖ್ಯ ಭಾಗಗಳು ಗೊಂಡೆರದ ಕಲಾತ್ಮಕ ಹುರಿ.

# ಮೌಲ್ಯ ಮಾಪನ

ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ವೀರಗಾಸೆ **ಶೈವ** ಸಂಪ್ರದಾಯದ ಧಾರ್ಮಿಕ ವೀರನೃತ್ಯ.
2. ವೀರಗಾಸೆ ಕರ್ನಾಟಕದ **ಜನಪದ** ಕಲೆಯಾಗಿದೆ.
3. ವೀರಗಾಸೆಯ ಕುಣಿತ ನೋಡುವವರಿಗೆ **ರೋಮಾಂಚನವನ್ನುಂಟು** ಮಾಡುತ್ತದೆ.
4. ಕಂಸಾಳೆ **ಕಾಂಸತಾಲ್ಯ** ಎಂಬ ಪದದ ತದ್ಭವ ರೂಪವಾಗಿದೆ.
5. 'ನಾವೆಲ್ಲ' ಇದು **ಲೋಪ** ಸಂಧಿಗೆ ಉದಾಹರಣೆಯಾಗಿದೆ.

# ಮನೆಗೆಲಸ

- ಕರ್ನಾಟಕದ ಜನಪದ ಕಲೆಗಳಾದ ವೀರಗಾಸೆ & ಕಂಸಾಳೆಯ ಬಗ್ಗೆ ಸಂಕ್ಷಿಪ್ತವಾಗಿ ವೈಶಿಷ್ಟ್ಯತೆಯನ್ನು ವಿವರಿಸಿರಿ.